ನೀರಾವರಿ ಕಾಮಗಾರಿಗಳಿಗೆ ಮಾಡಲಾಗಿರುವ ವೆಚ್ಚ

383(1400); ಶ್ರೀ ರಮೇಶ್ ಕುಮಾರ್ ಕೆ.ಆರ್ (ಶ್ರೀನಿವಾಸಪುರ)

ಅ) 2011 ರಿಂದ 31.3.2013 ರವರೆಗೆ ರಾಜ್ಯದಲ್ಲಿ ವಿವಿಧ ಬೃಹತ್ ಕಾಮಗಾರಿಗಳಿಗೆ ಸರ್ಕಾರವು ಹೂಡಿದ ಮೊತ್ತವೆಷ್ಟು;

ಆ) ರಾಜ್ಯದಲ್ಲಿ ಎಷ್ಟು ಎಕರೆ ವಿಸ್ತೀರ್ಣದ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ;

ಇ) ರಾಷ್ಟ್ರೀಯ ನಿಯಾಮಾವಳಿಗಳ ಪ್ರಕಾರ ಒಂದು ಎಕರೆಗೆ ನೀರಾವರಿ ಸೌಲಭ್ಯ ಒದಗಿಸಲು ತಗಲಬಹುದಾದ ಅಂದಾಜು ಮೊತ್ತವೆಷ್ಟು;

ಈ) ರಾಜ್ಯದಲ್ಲಿ ಈ ನೀತಿಗೆ ಅನುಗುಣವಾಗಿ ಹಣವನ್ನು ವಿವಿಧ ನೀರಾವರಿ ಯೋಜನೆಗಳಿಗೆ ವ್ಯಯಮಾಡಲಾಗಿದೆಯೇ?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು) (ಭಾರಿ ಮತ್ತು ಮಧ್ಯಮ ನೀರಾವರಿ)

ಅ) ಇಲಾಖೆಯ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನಾ ಕಾಮಗಾರಿಗಳಿಗೆ ಸರ್ಕಾರವು ನೀಡಿರುವ ಅನುದಾನ ಈ ಕೆಳಗಿನಂತಿವೆ;

(₹ ಕೋಟಿಗಳಲ್ಲಿ)

| ವರ್ಷ | ಅನುದಾನ | ವೆಚ್ಚ |
|---|---|---|
| 2011–12 | 6789.95 | 4144.42 |
| 2012–13 | 7044.28 | 5529.55 |

ಆ) ರಾಜ್ಯದಲ್ಲಿ 59,25,551 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.

ಇ) ರಾಷ್ಟ್ರೀಯ ನಿಯಮಾವಳಿಗಳ ಪ್ರಕಾರ ಒಂದು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ತಗಲಬಹುದಾದ ಅಂದಾಜು ಮೊತ್ತದ

ನಿಖರ ಮಾಹಿತಿ ಇರುವುದಿಲ್ಲ. ಆದಾಗ್ಯೂ ಪ್ರತಿಯೊಂದು ಯೋಜನೆಗೆ ತಾಂತ್ರಿಕವಾಗಿ ಪರಿಶೀಲಿಸಿ ಖರ್ಚಾಗಬಹುದಾದ ಅಂದಾಜು ಮೊತ್ತ ಹಾಗೂ ಆಯೋಜನೆಯಿಂದ ಒದಗುವ ನೀರಾವರಿ ಸೌಲಭ್ಯದಿಂದಾಗುವ ಹೆಚ್ಚುವರಿ ಉತ್ಪಾದನೆಯ ಮೊತ್ತ ಅಂದರೆ ಬೆನಿಫಿಟ್/ಕಾಸ್ಟ್ ಅನುಪಾತವನ್ನು ಲೆಕ್ಕಿಸಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

ಈ) ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗೆ ಅಂದಾಜು ಪಟ್ಟಿಯಲ್ಲಿ ಬಿ.ಸಿ ಅನುಪಾತವು 1.0ಕ್ಕಿಂತಲೂ ಹೆಚ್ಚಾಗಿರುವುದನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ನೀತಿಗೆ ಅನುಗುಣವಾಗಿ ಯೋಜನೆಗಳಿಗೆ ವ್ಯಯ ಮಾಡಲಾಗುತ್ತದೆ.

**ಕೆರೆಗಳ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನ**

**384(4627); ಶ್ರೀ ಸತೀಶ್ ಕೃಷ್ಣಸೈಲ್**

ಅ) ಉತ್ತರಕನ್ನಡ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಗೆ ಸೇರಿರುವ ಕೆರೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ಕಳೆದ ಸಾಲಿನಲ್ಲಿ ಕೆರೆಗಳ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; (ತಾಲ್ಲೂಕುವಾರು ಮತ್ತು ಕಾಮಗಾರಿವಾರು ವಿವರ ನೀಡುವುದು);

ಇ) ಉತ್ತರಕನ್ನಡ ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆಯಾಗಿದೆ (ತಾಲ್ಲೂಕುವಾರು ಮತ್ತು ಕಾಮಗಾರಿವಾರು ವಿವರ ನೀಡುವುದು)?